# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1875 (2166)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ನಗರ ರಸ್ತೆ ಸಾರಿಗೆ ನಿರ್ದೇಶನಾಲಯ (DULT) ದ ಕಾರ್ಯಚರಣೆಗಳ ಬಗ್ಗೆ

(ಅ) ರಾಜ್ಯದಲ್ಲಿನ ನಗರ ರಸ್ತೆ ಸಾರಿಗೆ ನಿರ್ದೇಶನಾಲಯ (DULT) ಯಾವಾಗ ಸ್ಥಾಪಿತವಾಯಿತು ಈ ನಿರ್ದೇಶನಾಲಯದ ಕಾರ್ಯಚರಣೆಗಳೇನು; (ವಿವರ ನೀಡುವುದು)

(ಆ) ಈ ನಿರ್ದೇಶನಾಲಯ ನೀತಿ-ನಿಯಮಗಳನ್ನು ರೂಪಿಸುತ್ತಿದೆಯೇ ಅಥವಾ ನಗರ ರಸ್ತೆ ಸಾರಿಗೆಗೆ ಸಂಬಂಧಿಸಿದಂತೆ, ಯೋಜನೆಗಳ ತಯಾರಿ, ಅನುಷ್ಠಾನ ಮತ್ತು ನಿರ್ವಹಣೆ ಕೆಲಸಗಳನ್ನು ನಿರ್ವಹಿಸುತ್ತಿದೆಯೇ;

(ಇ) ಹಾಗಿದ್ದಲ್ಲಿ, ಈ ನಿರ್ದೇಶನಾಲಯದ ಅಡಿ ಜಿಲ್ಲಾವಾರು ಹಮ್ಮಿಕೊಂಡಿರುವ ಯೋಜನೆಗಳು, ಜಾರಿಯಲ್ಲಿರುವ ಯೋಜನೆಗಳು ಮತ್ತು ಅನುಷ್ಠಾನದ ವಿವರಗಳನ್ನು ಭೌತಿಕ-ಆರ್ಥಿಕ ಗುರಿ ಹಾಗೂ ಸಾಧನೆಗಳನ್ನು ಒಳಗೊಂಡಂತೆ ವಿವರ ನೀಡುವುದು;

(ಈ) ಈ ನಿರ್ದೇಶನಾಲಯವು ಬೆಂಗಳೂರು ನಗರದಲ್ಲಿ ವಾಹನ ನಿಲುಗಡೆ ನೀತಿ-2 (Parking Policy-2 for Bengaluru) ಜಾರಿಗೊಳಿಸುತ್ತಿದೆಯೇ; ಹಾಗಿದ್ದಲ್ಲಿ, ಈ ವಾಹನ ನಿಲುಗಡೆ ನೀತಿ-2ರ ಪ್ರಮುಖ ಅಂಶಗಳೇನು; ಈ ನೀತಿಯನ್ನು ಅನುಷ್ಠಾನಗೊಳಿಸುವ ವ್ಯವಸ್ಥೆ ಯಾವುದು ಹಾಗೂ ಈ ವ್ಯವಸ್ಥೆಯಲ್ಲಿ ಇದುವರೆಗೂ ಸಂಗ್ರಹಿಸಿದ ವಾಹನ ನಿಲುಗಡೆ ಶುಲ್ಕವೆಷ್ಟು ಹಾಗೂ ಪಾರ್ಕಿಂಗ್ ನಿಯಮ ಉಲ್ಲಂಘನೆಗೆ ವಿಧಿಸುವ ದಂಡವೆಷ್ಟು; (ಸಂಪೂರ್ಣ ವಿವರ ನೀಡುವುದು)

(ಉ) ಹೊಸದಾಗಿ ರೂಪಿತವಾಗಿರುವ ಪಾರ್ಕಿಂಗ್ ನೀತಿಯನ್ನು ರಾಜ್ಯದ ಇತರ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಲು ಸರ್ಕಾರ ಆಲೋಚಿಸಿದೆಯೇ? (ವಿವರ ನೀಡುವುದು)